ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 11-07-2017

## ಪತ್ರಿಕಾ ಆಮಂತ್ರಣ

1. **ಕಾ. ತ. ಚಿಕ್ಕಣ್ಣ ಗ್ರಂಥಗಳ ಲೋಕಾರ್ಪಣೆ:**

**ಲೋಕಾರ್ಪಣೆ:**

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಕೃತಿ ಪರಿಚಯ:**

ಡಾ. ಹಿ.ಶಿ. ರಾಮಚಂದ್ರೇಗೌಡ, ಸಂಸ್ಕೃತಿ ಚಿಂತಕರು, ಮೈಸೂರು

ಡಾ. ಪುರುಷೋತ್ತಮ ಬಿಳಿಮಲೆ, ವಿದ್ವಾಂಸರು, ದೆಹಲಿ.

**ಅಧ್ಯಕ್ಷತೆ:**

ಎಚ್. ಎಂ. ರೇವಣ್ಣ, ಶಾಸಕರು ಹಾಗೂ ಮಾಜಿ ಸಚಿವರು.

ದಿನಾಂಕ: 12-07-2017, ಬುಧವಾರ, ಸಮಯ : ಸಂಜೆ 6-00 ಗಂಟೆಗೆ.

ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಜಿ.ಎಸ್.ಟಿ. ಜಾರಿಯಿಂದ ಔಷಧಗಳ ಲಭ್ಯತೆಗೆ ಆಂತಕ ಬೇಡ

ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)

**ಕೆಲವು ಸಾಮಾಜಿಕ ಜಾಲತಾಣಗಳಲ್ಲಿ (ಸೋಷಿಯಲ್ ಮೀಡಿಯಾ) ಜಿ.ಎಸ್.ಟಿ. ಜಾರಿಯಿಂದ ಔಷಧಗಳ ಕೊರತೆಯಾಗುತ್ತದೆ ಎನ್ನುವ ಸುದ್ದಿಯು ವೈರಲ್ ಆಗಿ ಹರಿದಾಡುತ್ತಿರುತ್ತದೆ.**

**ಜಿ.ಎಸ್.ಟಿ. ಜಾರಿಯಿಂದ ಔಷಧಗಳ ಲಭ್ಯತೆಯಲ್ಲಿ ಯಾವುದೇ ಕೊರತೆ ಇರುವುದಿಲ್ಲ. ಔಷಧ ವಿತರಕರು ಔಷಧಿಗಳನ್ನು ಎಂದಿನಂತರ ಸಾರ್ವಜನಿಕರಿಗೆ ಲಭಿಸುವಂತೆ ಕ್ರಮ ಜರುಗಿಸಿರುತ್ತಾರೆ. ಸಾರ್ವಜನಿಕರು ಜಿ.ಎಸ್.ಟಿ. ಜಾರಿಯಿಂದ ಔಷಧ ಲಭ್ಯತೆಯ ಬಗ್ಗೆ ಯಾವುದೇ ಆತಂಕಪಡುವ ಅವಶ್ಯಕತೆ ಇರುವುದಿಲ್ಲ.**

**ಔಷಧ ನಿಯಂತ್ರಣ ಇಲಾಖೆಯ, ರಾಜ್ಯ ಎಲ್ಲಾ ಜಿಲ್ಲೆಯ ಕಚೇರಿಗಳ ಸಹಾಯಕ ಔಷಧ ನಿಯಂತ್ರಕರುಗಳಿಗೆ ಸಾರ್ವಜನಿಕರಿಗೆ ಔಷಧ ಲಭ್ಯತೆಯ ಕುರಿತು ಮಾಹಿತಿಯನ್ನು ನೀಡಲು ಸೂಚಿಸಲಾಗಿದೆ. ಎಲ್ಲಾ ಜಿಲ್ಲಾ ಕಚೇರಿಗಳ ಸಹಾಯಕ ಔಷಧ ನಿಯಂತ್ರಕರುಗಳ ದೂರವಾಣಿ ಸಂಖ್ಯೆ ಮತ್ತು ಇತರೇ ವಿವರಗಳನ್ನು ಇಲಾಖೆಯ ಅಂತರ್ಜಾಲ http://drugs.kar.nic.in ನಲ್ಲಿ ಲಭ್ಯವಿರುತ್ತದೆ ಎಂದು ಕರ್ನಾಟಕ ರಾಜ್ಯದ ಔಷಧ ನಿಯಂತ್ರಕರ ಕಚೇರಿ ಪ್ರಕಟಣೆ ತಿಳಿಸಿದೆ.**

ಎಸ್‌ಎಂ:ಜೆಡಿ:ಜಿಪಿಆರ್

# ಕಾರ್ಯಾಗಾರ ಮುಂದೂಡಿಕೆ

ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)

ಬಾಲ ಭವನವು ಶಿಲ್ಪಕಲಾ ಮತ್ತು ಲಲಿತ ಕಲಾ ಅಕಾಡೆಮಿ ಹಾಗೂ ಇಸ್ರೋ ಸಂಸ್ಥೆಯ ಸಹಯೋಗದೊಂದಿಗೆ, ಭಾಲ ಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಜುಲೈ 8 ಮತ್ತು 9 ರಂದು ಪ್ರಾಯೋಗಿಕವಾಗಿ ಹಮ್ಮಿಕೊಂಡಿದ್ದ ಎರಡು ದಿನ ಗಳ ಕಾರ್ಯಾಗಾರವನ್ನು ಜುಲೈ 15 ಮತ್ತು 16 ಕ್ಕೆ ಮುಂದೂಡಿದೆ.

9– 16 ವರ್ಷದೊಳಗಿನ ಮಕ್ಕಳಿಗೆ ಜಾನಪದ ಕ್ಷೇತ್ರದಲ್ಲಿ ಕಂಸಾಳೆ – ಪಟ್ಟದ ಕುಣಿತ, ಜೇಡಿಮಣ್ಣಿನ ಕಲೆ " ಜನಪದ ಸಾಂಝಿ ಕಾಗದ ಕತ್ತರಿ ಕಲೆ " ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ನಡೆಸುವ ಕಾರ್ಯಾಗಾರಕ್ಕೆ ಪ್ರತಿ ಚಟುವಟಿಕೆಗೆ 50 ಮಕ್ಕಳಿಗೆ ಮಾತ್ರ ಉಚಿತ

ಪ್ರವೇಶಾವಕಾಶ ಕಲ್ಪಿಸಲಾಗಿದೆ. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮತ್ತು ಸೌಲಭ್ಯ ವಂಚಿತ ಮಕ್ಕಳ ಪ್ರವೇಶಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಆಸಕ್ತ ಮಕ್ಕಳು ತಮ್ಮ ಹೆಸರುಗಳನ್ನು ಜುಲೈ 14 ರ ಒಳಗೆ ಮೊದಲು ಬಂದವರತಿಗೆ ಮೊದಲ ಆದ್ಯತೆ ಮೇರೆಗೆ ಬೆಳಿಗ್ಗೆ 11.00 ರಿಂದ ಸಂಜೆ 5.30 ರವರೆಗೆ ದೂರವಾಣಿ ಮೂಲಕ ನೋಂದಾಯಿಸಬಹುದು. (ರಜಾ ದಿನ ಹೊರತುಪಡಿಸಿ)

ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-22864189/22851423 ರ ಕಚೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಿದೆ

ಎಸ್‌ಎಂ:ಜೆಡಿ:ಜಿಪಿಆರ್

# ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)

2017-18 ನೇ ಸಾಲಿಗಾಗಿ ಪಾಲಿಟೆಕ್ನಿಕ್‌ಗಳಲ್ಲಿ ಬೋಧಿಸಲಾಗುವ ಪೋಸ್ಟ್ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

ಬೆಂಗಳೂರಿನ ಸರ್ಕಾರಿ ಎಸ್. ಜೆ. ಪಾಲಿಟೆಕ್ನಿಕ್ - ಪೋಸ್ಟ್ ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್, ಬಳ್ಳಾರಿಯ ಸರ್ಕಾರಿ ಪಾಲಿಟೆಕ್ನಿಕ್ - ಪೋಸ್ಟ್ ಡಿಪ್ಲೋಮಾ ಇನ್ ಇಂಡಸ್ಟ್ರಿಯಲ್ ಸೇಪ್ಟಿ, ಬೆಂಗಳೂರಿನ ಎಂ.ಎಸ್. ರಾಮಯ್ಯ ಪಾಲಿಟೆಕ್ನಿಕ್ - ಪೋಸ್ಟ್ ಡಿಪ್ಲೋಮಾ ಇನ್ ಸಾಫ್ಟ್‌ವೇರ್ ಟೆಸ್ಟಿಂಗ್ ಹಾಗೂ ಬಳ್ಳಾರಿ ಜಿಲ್ಲೆಯ ರಾಜೀವ್‌ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಸ್ಟೀಲ್ ಟೆಕ್ನಾಲಜಿ, ತೋರಣಗಲ್ - ಪೋಸ್ಟ್ ಡಿಪ್ಲೋಮಾ ಇನ್ ಇಂಡಸ್ಟ್ರಿಯಲ್ ಕೋರ್ಸಿಗಾಗಿ.

ನಿಗದಿತ ಅರ್ಜಿಯನ್ನು ಮೇಲ್ಕಂಡ ಪಾಲಿಟೆಕ್ನಿಕ ಪ್ರಿನ್ಸಿಪಾಲರವರ ಕಚೇರಿಯಿಂದ ಜುಲೈ 20 ರವೆಗೆ ಪಡೆಯಬಹುದಾಗಿದೆ. ಅರ್ಜಿ ಶುಲ್ಕ ಎಸ್.ಸಿ./ಎಸ್.ಟಿ. ಮತ್ತು ವರ್ಗ - 1 ರ ಅಭ್ಯರ್ಥಿಗಳಿಗೆ ರೂ 50/- ಮತ್ತು ಸಾಮಾನ್ಯ ವರ್ಗದವರಿಗೆ ರೂ 100/- ಎಂದು ನಿಗದಿಪಡಿಸಲಾಗಿದೆ.

ಪ್ರವೇಶಕ್ಕೆ ಇರಬೇಕಾದ ಕನಿಷ್ಠ ವಿದ್ಯಾರ್ಹತೆ ಹಾಗೂ ಇತರೇ ಅರ್ಹತೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಪಾಲಿಟೆಕ್ನಿಕ್‌ಗಳ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್

## ವಿವಿಧ ಕ್ಷೇತ್ರಗಳಲ್ಲಿ ವಿಕಲಚೇತನರ ಪುನರ್ವಸತಿಗಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿ/ಸಂಸ್ಥೆಗಳಿಂದ ರಾಷ್ಟ್ರಪಶಸ್ತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)

ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು 2017 ನೇ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಕಲಚೇತನರ ಪುನರ್ವಸತಿಗಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ/ಸಾಧನೆ ಮಾಡಿದ ವ್ಯಕ್ತಿಗಳು/ಸಂಸ್ಥೆಗಳಿಂದ ರಾಷ್ಟ್ರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಈ ಪ್ರಶಸ್ತಿಗೆ ಅರ್ಹ ವಿಕಲಚೇತನ ವ್ಯಕ್ತಿಗಳು ಹಾಗೂ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳು ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ನಮೂನೆಗಳಿಗಾಗಿ ವೆಬ್‌ಸೈಟ್ www.disabilityaffairs.gov.in ಅನ್ನು ಪರಿಶೀಲಿಸಲು ಮತ್ತು ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಮತ್ತು ನಿರ್ದೇಶಕರು, ವಿಕಲಚೇತರನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ 080 22866066, 22866046, 22860907 ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್

## ನೆಲದ ಸಿರಿ ಮಾಲಿಕೆ: ಸಾಕ್ಷ್ಯಚಿತ್ರಗಳ ಪ್ರಸಾರ

**ಬೆಂಗಳೂರು, ಜುಲೈ 11 (ಕರ್ನಾಟಕ ವಾರ್ತೆ)**

ನೆಲದ ಸಿರಿ ಮಾಲಿಕೆಯಡಿ ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ನಿರ್ಮಿಸಿರುವ ಈ ಕೆಳಕಂಡ ಸಾಕ್ಷ್ಯಚಿತ್ರಗಳ ಸಂಚಿಕೆಯನ್ನು ಆಯಾ ದಿನಾಂಕದಂದು ಸಂಜೆ 6:00 ರಿಂದ 6:15 ಅವಧಿಯಲ್ಲಿ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರ ಮಾಡಲಾಗುವುದು.

ದಿನಾಂಕ: 11-07-2017, ಮಂಗಳವಾರ, ಶಿರಗುಪ್ಪಿ ಮಾದರಿ ಗ್ರಾಮ ಪಂಚಾಯತ್, ದಿನಾಂಕ: 12-07-2017, ಬುಧವಾರ,. ಸೇಡಂ ನ್ಯಾಯಾಲಯ & ರೇಷ್ಮೆಯಿಂದ ಪ್ರಗತಿ, ಗುಲ್ಬರ್ಗಾ ಜಿಲ್ಲೆ, ದಿನಾಂಕ: 13-07-2017, ಗುರುವಾರ, ರೈಲ್ವೇ ಕಂಬಿಗಳಿಂದ ಆನೆ ತಡೆ ಬೇಲಿ ಯೋಜನೆ. ಮೈಸೂರು, ದಿನಾಂಕ: 14-07-2017, ಶುಕ್ರವಾರ, ಶಿರಸಿಯ ಶ್ರೀ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆ, ಉತ್ತರ ಕನ್ನಡ.